# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ


(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು–570 017
www.cescmysore.org

ರವರ ಕಛೇರಿ
ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಬೇಲೂರು.
ದೂ.ಸಂ. 08177–222223
E.Mail : aeehsnbelur@rediffmail.com


ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಬೇ/2017-18/F-16/ 1445-48. ದಿನಾಂಕ : 7.10.17

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ : 23.09.17 ರಂದು ಮಾನ್ಯ ಸುಚೇತನ್, ಅಧೀಕ್ಷಕ ಇಂಜಿನಿಯರ್(ವಿ), ಹಾಸನ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ;**

1. ಶ್ರೀ ನಾರಾಯಣ ಬೋವಿ, ಕಾ. ಇಂ(ವಿ), ಸಕಲೇಶಪುರ ವಿಭಾಗ.
2. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ.
3. ಶ್ರೀ ತೋಟಪ್ಪ, ಲೆಕ್ಕಾಧಿಕಾರಿ(ಆಂ.ಪ), ಸಕಲೇಶಪುರ ವಿಭಾಗ.
4. ಶ್ರೀಮತಿ ಕವಿತಾ ಹೆಚ್. ಆರ್, ಸ.ಕಾ.ಇಂ(ವಿ), ಬೇಲೂರು ಉಪವಿಭಾಗ.
5. ಶ್ರೀ ಹರೀಶ್ ಕುಮಾರ್ ವೈ. ಎನ್. ಸ.ಇಂ(ತಾಂ), ಬೇಲೂರು ಉಪವಿಭಾಗ.
6. ಶ್ರೀ ಮಹದೇವ್ ಕೆ. ಕೆ., ಸಹಾಯಕ ಇಂಜಿನಿಯರ್(ವಿ), ಬೇಲೂರು ನಗರ ಶಾಖೆ.
7. ಶ್ರೀ ಚಿಕ್ಕವರದಯ್ಯ, ಕಿರಿಯ ಇಂಜಿನಿಯರ್(ವಿ), ಹಳೇಬೀಡು ಶಾಖೆ.
8. ಶ್ರೀ ಡಿ. ಸಂತೋಷ್ ಕುಮಾರ್, ಕಿರಿಯ ಇಂಜಿನಿಯರ್(ವಿ), ಹಗರೆ ಶಾಖೆ.
9. ಶ್ರೀ ಜಿ. ಶಶಿಕಿರಣ್, ಕಿರಿಯ ಇಂಜಿನಿಯರ್(ವಿ), ತೊಳಲು ಶಾಖೆ.
10. ಶ್ರೀ ಎಂ. ರೇವಣ್ಣ, ಕಿರಿಯ ಇಂಜಿನಿಯರ್(ವಿ), ಅರೇಹಳ್ಳಿ ಶಾಖೆ.

ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಬೆಳಿಗ್ಗೆ 11 : 00 ಘಂಟೆಗೆ ಪ್ರಾರಂಭ ಮಾಡಿದರು.

---

## ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ ;

I. ಶಿವಕುಮಾರ್, ಮದಘಟ್ಟ.

1. ಮಧಗಟ್ಟ ಪರಿವರ್ತಕದಲ್ಲಿ ಅನಧಿಕೃತ ನೀರಾವರಿ ಪಂಪ್ ಸೆಟ್‌ಗಳು ಅಧಿಕವಾಗಿರುವ ಬಗ್ಗೆ ಗ್ರಾಹಕರು ತಿಳಿಸಿದಾಗ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕಾಗಿ ಮಾನ್ಯ ಅಧ್ಯಕ್ಷರು ಶಾಖಾಧಿಕಾರಿಗಳು, ಅರೇಹಳ್ಳಿ ಶಾಖೆ ರವರಿಗೆ ಸೂಚಿಸಿದರು.

2. ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಪರಿವರ್ತಕವನ್ನು ಹಾಕಿಸಿಕೊಡುವಂತೆ ಗ್ರಾಹಕರು ಕೋರಿದಾಗ, ಮಾನ್ಯ ಅಧ್ಯಕ್ಷರು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಸಂಬಂಧಪಟ್ಟ ನಿಗಮದಲ್ಲಿ ಅರ್ಜಿಯನ್ನು ನೊಂದಾಯಿಸಿ ಸಲ್ಲಿಸಿದ್ದಲ್ಲಿ ಇಲಾಖಾ ನಿಯಮಾನುಸಾರ ಪರಿವರ್ತಕವನ್ನು ಅಳವಡಿಸಲು ಮೂಮದಿನ ಕ್ರಮ ಕೈಗೊಳ್ಳಬೇಕಾಗಿ ಶಾಖಾಧಿಕಾರಿಗಳು, ಅರೇಹಳ್ಳಿ ಶಾಖೆ ರವರಿಗೆ ಸೂಚಿಸಿದರು.

II. ಸಿದ್ದಯ್ಯ, ಅಂದಲೆ.

1. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಅಳವಡಿಸಿರುವ 25 ಕೆವಿಎ ಪರಿವರ್ತಕ ವಿಫಲಗೊಂಡಿದ್ದು, ಪರಿವರ್ತಕವನ್ನು ಬದಲಾಯಿಸಬೇಕಾಗಿ ಕೋರಿದಾಗ, ಮಾನ್ಯ ಅಧ್ಯಕ್ಷರು ಪರಿವರ್ತಕವನ್ನು ಕೂಡಲೆ ಬದಲಾಯಿಸಬೇಕಾಗಿ ಶಾಖಾಧಿಕಾರಿಗಳು, ಹಗರೆ ಶಾಖೆ ರವರಿಗೆ ಸೂಚಿಸಿದರು.

III. ಗೋವಿಂದ ಶೆಟ್ಟಿ, ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷರು, ಬಿಕ್ಕೋಡು.

1. ಹಾಲಿ ಇರುವ 63 ಕೆವಿಎ ವಿದ್ಯುತ್ ಪರಿವರ್ತಕದಲ್ಲಿ ಅಧಿಕ ಸಂಪರ್ಕಿತ ಬಾರವಿದ್ದು, ಇದರಿಂದಾಗಿ ಹುಸ್ಕೂರು ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆಯುಂಟಾಗಿದ್ದು, ಇದಕ್ಕೆ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಿಕೊಡಬೇಕಾಗಿ ಕೋರಿರುತ್ತಾರೆ ಹಾಗೂ ಈ ಪರಿವರ್ತಕದ ಎಲ್.ಟಿ. ಮಾರ್ಗಗಳಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸುವಂತೆ ಗ್ರಾಹಕರು ಕೋರಿರುತ್ತಾರೆ. ಇದಕ್ಕೆ ಉತ್ತರವಾಗಿ ಶಾಖಾಧಿಕಾರಿ, ಅರೆಹಳ್ಳಿ ಶಾಖೆ ರವರು ಈಗಾಗಲೇ 3*25 ಕೆವಿಎ ಪರಿವರ್ತಕಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿರುವುದಾಗಿ ತಿಳಿಸಿರುತ್ತಾರೆ. ಮಾನ್ಯ ಅಧ್ಯಕ್ಷರು ರವರು ಅನಧಿಕೃತ ನೀರಾವರಿ ಪಂಪುಸೆಟ್ ಗಳಿದ್ದಲ್ಲಿ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಸಕ್ರಮಗೊಳಿಸಬೇಕಾಗಿ ತಿಳಿಸಿರುತ್ತಾರೆ ಹಾಗೂ ಶಾಖಾಧಿಕಾರಿಯವರಿಗೆ ಶೀಘ್ರವಾಗಿ ಮಧ್ಯಂತರ ಕಂಬಗಳನ್ನು ಅಳವಡಿಸಿಕೊಡಬೇಕಾಗಿ ತಿಳಿಸಿರುತ್ತಾರೆ.

IV. ತಿಮ್ಮೇಗೌಡ, ರಂಗನಾಥ ರೈಸ್ ಮಿಲ್, ಮುದಿಗೆರೆ, ಬೇಲೂರು.

1. ಗ್ರಾಹಕರ ತಮ್ಮ ರೈಸ್ ಮಿಲ್‌ಗೆ ಅಳವಡಿಸಿರುವ 100 ಕೆವಿಎ ಪರಿವರ್ತಕದಲ್ಲಿ ಅಧಿಕ ಹೊರೆ ಇದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವಂತೆ ಕೋರಿದರು. ಇದಕ್ಕೆ ಸಂಬಂಧಿಸಿದಂತೆ ಶಾಖಾಧಿಕಾರಿಯವರು ಹಾಲಿ ಇರುವ 100 ಕೆವಿಎ ಪರಿವರ್ತಕಕ್ಕೆ ಹೆಚ್ಚುವರಿಯಾಗಿ 100 ಕೆವಿಎ ಅಧಿಕ ಪರಿವರ್ತಕವನ್ನು ಅಳವಡಿಸಲು ಐಪಿಡಿಎಸ್ ಯೋಜನೆಯಡಿಯಲ್ಲಿ ಸೇರಿಸಿದ್ದು ಶೀಘ್ರವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.

V. ಹರೀಶ್. ಹೆಚ್., ಚಟ್ನಳ್ಳಿ ಗ್ರಾಮ, ಅರೇಹಳ್ಳಿ ಹೋಬಳಿ.

1. ಇವರ ಹಸುವು ವಿದ್ಯುತ್ ಅಪಘಾತದಿಂದ ಮರಣ ಹೊಂದಿರುವುದರಿಂದ ಈ ಸಂಬಂಧ ಪರಿಹಾರ ನೀಡಲು ಆಗ್ರಹಿಸಿದರು. ಅದಕ್ಕೆ ಉತ್ತರವಾಗಿ ಇಲಾಖೆಯ ನಿಯಮಗಳನ್ನು ಪಾಲಿಸಿ ಶೀಘ್ರವೇ ಪರಿಹಾರ ನೀಡಲಾಗುವುದು ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

VI. ತೇಜಸ್, ಇಂಟಿತೊಳಲು

1. ಇಂಟಿತೊಳಲುವಿನಲ್ಲಿ 63 ಕೆವಿಎ ಪರಿವರ್ತಕದಲ್ಲಿ ಅಧಿಕ ಹೊರೆಯಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಕೊಡಲು ಗ್ರಾಹಕರು ಕೋರಿದಾಗ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿ ಮಾಡಿರುವವರ ಸಂಖ್ಯೆಯನುಸಾರ ಇಲಾಖೆಯ ನಿಯಮಗಳನ್ನು ಆಧರಿಸಿ ಜ್ಯೇಷ್ಠತಾ ಪಟ್ಟಿಯನುಸಾರ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಪರಿವರ್ತಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

VII. ದರ್ಶನ್ ಕುಮಾರ್, ಕೃತಿಕ್, ಈಚಲಹಳ್ಳಿ ಗ್ರಾಮಸ್ಥರು.

1. ಈಚಲಹಳ್ಳಿ ಗ್ರಾಮದಲ್ಲಿ 13 ಜನ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿ ಮಾಡಿರುತ್ತೇವೆ, ಹಾಲಿ 1*25 ಕೆವಿಎ ಪರಿವರ್ತಕದಲ್ಲಿ ಅಧಿಕ ಹೊರೆ ಇದ್ದು ವೋಲ್ಟೇಜ್ ಸಮಸ್ಯೆಯಿಂದಾಗಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ ಎಂದು ದೂರಿರುತ್ತಾರೆ. ಅದಕ್ಕೆ ಉತ್ತರವಾಗಿ ಶಾಖಾಧಿಕಾರಿ, ಅರೇಹಳ್ಳಿ ಶಾಖೆ ರವರು 2*25 ಕೆವಿಎ ಪರಿವರ್ತಕಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ಈಗಾಗಲೆ ತಯಾರಿಸಲಾಗಿದೆ ಎಂದು ತಿಳಿಸಿದರು, ಅದಕ್ಕೆ ಉತ್ತರವಾಗಿ ಮಾನ್ಯ ಅಧ್ಯಕ್ಷರು ಮಂಜೂರಾತಿ ದೊರೆತ ಮೇಲೆ ಶೀಘ್ರವೇ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ತಿಳಿಸಿದರು.

VIII. ಸಿ. ಬಿ. ರಮೇಶ್, ಚಿಕ್ಕಮೇದೂರು.

1. ಚಿಕ್ಕಮೇದೂರು ಗ್ರಾಮದಲ್ಲಿ ತೋಟದ ಮನೆಯಿದ್ದು ನೀರಾವರಿ ಪಂಪ್ ಸೆಟ್ ಫೀಡರ್ ನಿಂದ 4 ಮನೆಗಳಿಗೆ ವಿದ್ಯುತ್ ಸಂಪರ್ಕ ಇದ್ದು, ನಮ್ಮ ಮನೆಗಳಿಗೆ ಎನ್.ಜೆ.ವೈ. ಫೀಡರ್ ನಿಂದ ವಿದ್ಯುತ್ ಸಂಪರ್ಕ ಕೊಡಬೇಕಾಗಿ ದೂರಿರುತ್ತಾರೆ. ಅದಕ್ಕನುಗುಣವಾಗಿ ಮಾನ್ಯ ಅಧ್ಯಕ್ಷರು ರವರು ಗ್ರಾಹಕರಿಗೆ ಸ್ವಯಂ ಕಾರ್ಯ ನಿರ್ವಹಣೆ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿಕೊಳ್ಳಬೇಕಾಗಿ ತಿಳಿಸಿರುತ್ತಾರೆ.

IX. ಸೈಯ್ಯದ್ ಆರಿಫ್ ಹಾಗು ಸೈಯ್ಯದ್ ಮುನೀರ್, ಬಂಟೇನಹಳ್ಳಿ

1. ಗ್ರಾಹಕರು ಬಂಟೇನಹಳ್ಳಿಯಲ್ಲಿರುವ 3 ಮನೆಗಳಿಗೆ ಹಾಲಿ ಹಳ್ಳಿಡಿ NJY ಫೀಡರ್ ನಿಂದ ವಿದ್ಯುತ್ ಸರಬರಾಜಾಗುತ್ತಿದ್ದು (63 ಕೆವಿಎ ಪರಿವರ್ತಕದಿಂದ) ಲೈನ್ ಟ್ರಬಲ್‌ನಿಂದಾಗಿ ನಿರಂತರವಾಗಿ ವಿದ್ಯುತ್ ಕಡಿತವಾಗುತ್ತಿದ್ದು ಇದರಿಂದಾಗಿ ತುಂಬಾ ವಿದ್ಯುತ್ ಸಮಸ್ಯೆ ಎದುರಿಸುತ್ತಿದ್ದು ಅಲ್ಲೆ ಹಾದು ಹೋಗಿರುವ ಬೇಲೂರು ಟೌನ್ ಫೀಡರ್ ನಿಂದ ವಿದ್ಯುತ್ ಸಂಪರ್ಕವನ್ನು ನೀಡಬೇಕಾಗಿ ಕೋರಿರುತ್ತಾರೆ. ಅದಕ್ಕೆ ಉತ್ತರವಾಗಿ ಸಹಾಯಕ ಇಂಜಿನಿಯರ್(ವಿ), ಬೇಲೂರು ಶಾಖೆರವರು ಇನ್ಸುಲೇಟರ್ ಸಮಸ್ಯೆ ಯಿಂದಾಗಿ ತುಂಬಾ ಲೈನ್ ಟ್ರಬಲ್ ಆಗಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಐ.ಪಿ.ಡಿ.ಎಸ್. ಯೋಜನೆಯಡಿಯಲ್ಲಿ ಬಂಟೇನಹಳ್ಳಿಯಲ್ಲಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಈಗಾಗಲೆ ಸೇರಿಸಲಾಗಿದ್ದು ಕಾಮಗಾರಿಯನ್ನು ಪೂರ್ಣಗೊಳಿಸಿ ಸಮಸ್ಯೆಯನ್ನು ಬಗೆಹರಿಸಿ ಕೊಡಲಾಗುವುದು ಎಂದು ಮಾನ್ಯ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

X. ಸುಳಗಳಲೆಯ ಗ್ರಾಮಸ್ಥರು

1. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಗ್ರಾಮದ ರಸ್ತೆಯನ್ನು ವಿಸ್ತರಿಸಿದಾಗ ಕಂಬಗಳನ್ನು ಸ್ಥಳಾಂತರಿಸದೆ ಕಂಬಗಳು ರಸ್ತೆಯ ಮಧ್ಯದಲ್ಲಿ ಉಳಿದಿದ್ದು ಇದರಿಂದಾಗಿ ಅಪಘಾತವಾಗುವ ಸಂಭವ ಹೆಚ್ಚಿರುವುದರಿಂದ ಕಂಬಗಳನ್ನು ರಸ್ತೆಯ ಪಕ್ಕಕ್ಕೆ ಸ್ಥಳಾಂತರಿಸಿಕೊಡಬೇಕಾಗಿ ದೂರಿರುತ್ತಾರೆ. ಅದಕ್ಕೆ ಉತ್ತರವಾಗಿ ಸಂಬಂಧಿಸಿದ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗೆ ದೂರನ್ನು ನೀಡುವಂತೆ ತದಾನಂತರ ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಇಲಾಖಾ ನಿಯಮಾನುಸಾರ ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 2 : 30 ಕ್ಕೆ ಮುಕ್ತಾಯಗೊಳಿಸಲಾಯಿತು.**

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಸೆಸ್ಕ್, ಬೇಲೂರು.

*ಯಥಾ ಪ್ರತಿಗಳನ್ನು :*

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಶಾಖಾಧಿಕಾರಿ, ಬೇಲೂರು/ತೊಳಲು/ಹಳೇಬೀಡು/ಹಗರೆ/ಅರೇಹಳ್ಳಿ ಶಾಖೆ ರವರಿಗೆ ಸಲ್ಲಿಸಿದೆ.
4. ಸಹಾಯಕ ಇಂಜನಿಯರ್(ತಾಂ), ಬೇಲೂರು ಉಪವಿಭಾಗ ರವರಿಗೆ ಸಲ್ಲಿಸಿದೆ.
5. ಕಛೇರಿ ಪ್ರತಿ.